# <u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>

**ಸಿ.ಸಿ. 1801 /2024** **CW-3 PW-2**

| | |
|---|---|
| ***ಹೆಸರು*** | ಮಲ್ಲಿಕಾರ್ಜುನ |
| ***ತಂದೆಯ ಹೆಸರು*** | ವೀರನಗೌಡ |
| ***ವಯಸ್ಸು*** | 30 ವರ್ಷ |
| ***ವೃತ್ತಿ*** | ವ್ಯವಸಾಯ |
| ***ವಿಳಾಸ*** | ಬೆಳಗಲ್ . |

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 03 -09-2025.**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ</u>**

1. ನನಗೆ ಚಾಸಾ-2 ರವರು ಪರಿಚಯ. ಆರೋಪಿ ನನಗೆ ಪರಿಚಯ ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಯು ಜಪ್ತು ಪಂಚನಾಮೆ ಆಗಿದ್ದು ಸದ್ರಿ ದಾಖಲೆಯನ್ನು ಅದನ್ನು ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1 -ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಉಪ್ಪಾರಹೊಸಹಳ್ಳಿಯಲ್ಲಿ ಮಾಡಿದ್ದೆ. ನಿಪಿ 1 ರಲ್ಲಿ ಬರೆದ ವಿಷಯ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ಅಬಕಾರಿ ಪೊಲೀಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿಯನ್ನು ಮಾಡಿದೆ. ನಾನು ನ್ಯಾಯಾಲಯದ ಮುಂದೆ ಇರುವ ಮು.ಮಾಲನ್ನು ನೋಡಿಲ್ಲ.

***(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಮಾನ್ಯ ಎಪಿಪಿ ಯವರ ಕೋರಿಕೆಯನ್ನು ಪರಿಗಣಿಸಿ ಪಾಟಿ ಸವಾಲಿಗೆ ಅವಕಾಶ ನೀಡಲಾಯಿತು.)***

**<u>ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದಃ</u>**

2. ದಿಃ 19-04-2024 ರಂದು ಬೆಃ 10.30 ಗಂಟೆಗೆ ನಾನು ಮತ್ತು ಚಾಸಾ-2 ರವರು ತೆಕ್ಕಲಕೋಟೆ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ನಿಂತಿದ್ದಾಗ ಅಬಕಾರಿ ಪೊಲೀಸರು ದಾಳಿ ಬಗ್ಗೆ ತಿಳಿಸಿದ್ದು ತೆಕ್ಕಲಕೋಟೆ ಪಟ್ಟಣದಿಂದ ಉಪ್ಪಾರ ಹೊಸಹಳ್ಳಿ ಗ್ರಾಮದ ಕಡೆಗೆ ದ್ವಿಚಕ್ರ ವಾಹದಲ್ಲಿ ಅಕ್ರಮ ಮಧ್ಯವನ್ನು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮಾಹಿತೆ ಬಂದಿದೆ ಎಂದು ತಿಳಿಸಿದ್ದು ನಾವು ಪಂಚರಾಗಿ ಸಹಕರಿಸಲು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಾವು ಹಾಗೂ ಪೊಲೀಸರು ತೆಕ್ಕಲಕೋಟೆ ಉಪ್ಪಾರ ಹೊಸಹಳ್ಳಿ ಮಾರ್ಗ ಮಧ್ಯೆ ನೀರಿನ ಟ್ಯಾಂಕ್ ಹತ್ತಿರ ರಸ್ತೆ ಗಾವಲು ಮಾಡುತ್ತಿರುವಾಗ ಬೆಃ 10.50 ಗಂಟೆಗೆ ತೆಕ್ಕಲಕೋಟೆ ಪಟ್ಟಣದ ಕಡೆಯಿಂದ ನಾವು ನಿಂತಿರುವ ಕಡೆಗೆ ಒಂದು ದ್ವಿಚಕ್ರ ವಾಹನ ಬರುತ್ತಿದ್ದು ವಾಹನದ ಮುಂಭಾಗದಲ್ಲಿ ಸದರಿ ವ್ಯಕ್ತಿ ಪ್ಲಾಸ್ಟಿಕ್ ಚೀಲ ಇಟ್ಟಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಚಾಸಾ-1 ರವರು ಶೋಧನಾ ಸಮುಚಿತ ವಾರೆಂಟನ್ನು ಸ್ಥಳದಲ್ಲಿಯೇ ತಯಾರಿಸಿ ಸದರಿ ವಾಹನದಲ್ಲಿ ಚೀಲವನ್ನು ಶೋಧಿಸಿದಾಗ ಅದರಲ್ಲಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ್‌ನ ವಿಸ್ಕಿಯ 48 ಟೆಟ್ರಾ ಪ್ಯಾಕ್, 90 ಎಂ ಎಲ್ ನ ಐವಾರ್ಡ ವಿಸ್ಕಿಯ 30 ಟೆಟ್ರಾ ಪ್ಯಾಕ್ ಇದ್ದವು ಎಂದರೆ ಸರಿಯಲ್ಲ. ಸದರಿ ವಾಹನ ಸಂಖ್ಯೆ ಕೆ ಎ 34 ಇ ಕ್ಯೂ 8607 ಎಂದು ಇತ್ತು ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಆತನು ಹೆಸರು ಈರಣ್ಣ ಎಂದು ತಿಳಿಸಿದ್ದು, ಮಧ್ಯವನ್ನು ಸಾಗಾಟ ಮಾಡಲು ಪರವಾನಿಗೆ ಇಲ್ಲ ಎಂದು ತಿಳಿಸಿದನು ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ 90 ಎಂ ಎಲ್ ನ ಒರಿಜಿನಲ್ ಚಾಯ್ಸ್‌ನ ವಿಸ್ಕಿಯ 16 ಟೆಟ್ರಾ ಪ್ಯಾಕ್, 90 ಎಂ ಎಲ್ ನ ಐವಾರ್ಡ ವಿಸ್ಕಿಯ 10 ಟೆಟ್ರಾ ಪ್ಯಾಕ್ ಪೊಲೀಸರು ಒಂದು ಚೀಲದಲ್ಲಿ ಹಾಕಿ ದಾರದಿಂದ ಸುತ್ತಿ ಸೀಲ್ ಹಾಕಿ ಅವುಗಳ ಮೇಲೆ ನಮ್ಮ ಸಹಿ ಇದ್ದ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ 11.00 ರಿಂದ 12.00 ರವರೆಗೆ ನಿಪಿಃ1 ರಂತೆ ನಮ್ಮ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಸರಿ ಇದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ಮಾನ್ಯ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**<u>ಮರು ವಿಚಾರಣೆಃ</u> ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**